ಬೆಳೆದ ಮಕ್ಕಳು ನಮ್ಮ ಅಪ್ಪುಗೆಯನ್ನ ಕಳಚಿಕೊಂಡು, ನಮ್ಮನ್ನ ದಾಟಿಹೋದದ್ದು ಅರಿವಿಗೇ ಬರಲಿಲ್ಲ. ನಮಗವರು ಇನ್ನೂ ಎಳೆಯರು. ನಾವಿನ್ನೂ ಆ ಕಾಲದಲ್ಲಿ ನಿಂತುಬಿಟ್ಟಿದ್ದೆವು. ಮಗ ಯು.ಎಸ್.ಎ.ಗೆ ಹೋದ. ಮಗಳು ನಮಗೊಂದು ಮಾತೂ ಹೇಳದೇ ವೆಸ್ಟ್ ಬೆಂಗಾಲಿಯನ್ನು ಮದುವೆಯಾಗಿ ಆಸ್ಟ್ರೇಲಿಯಾಕ್ಕೆ ಹೋದಳು. ಈ ಕಾಲದಲ್ಲಿ ಪತ್ರವೆಲ್ಲಿ? ಆಗಾಗ್ಗೆ ಫೋನ್, ಬಿಟ್ಟರೆ ಮೆಸೇಜ್. ಎಲ್ಲೇ ಇರಲಿ, ಅಷ್ಟಾದರೂ ಸಾಕಿತ್ತು. ಕೊನೆಗೆ ಅವೂ ಬಾರದೇ ಹೋದವು. ಹೆಂಡತಿ ಅದನ್ನೇ ಕೊರಗಾಗಿಸಿಕೊಂಡಳು. ಮನೆಯಲ್ಲಿ ಜೋಪಾನವಾಗಿ ಇಟ್ಟುಕೊಂಡಿದ್ದ ಅವರ ಚಿಕ್ಕಂದಿನ ಬಟ್ಟೆಗಳು, ಆಟಿಕೆಗಳನ್ನ ಸವರುತ್ತ, ಅವರ ಫೋಟೊಗಳನ್ನ ನೋಡುತ್ತ ದಿನದಿಂದ ದಿನಕ್ಕೆ ಕೃಶವಾಗುತ್ತ ಬಂದಳು. ಅವನ್ನೆಲ್ಲ ನೋಡಿ ನೋವು ಪಡ್ತಾಳೆ ಅಂತ ಕಾಣದಂತೆ ಇಡೋಣ ಎಂದು ಮರೆಯಲ್ಲಿಟ್ಟೆ. 'ಉಳಿದಿರೋದು ಇವು ಮಾತ್ರ, ಇರುವಷ್ಟು ದಿನ ಅದರಿಂದಲಾದ್ರೂ ನೆಮ್ಮದಿ ಪಡಿತೀನಿ, ಅದನ್ಯಾಕೆ ಅಡಗಿಸ್ತೀರಾ?' ಅಂತಾ ಗೋಳೋ ಅಂತ ಅತ್ತುಬಿಟ್ಟಳು. ರೆಕ್ಕೆಗೆ ಶಕ್ತಿಬಂದು ಬಾನ ಉದ್ದಕ್ಕೆ ಗರಿ ಬಿಚ್ಚಿ ಹಾರಿದ ಹಕ್ಕಿಗಳಿಗೆ ನೆಲದಲ್ಲಿನ ಸಂಕಟ ಹೇಗೆ ಅರ್ಥವಾಗುತ್ತದೆ, ಅಲ್ವಾ? ಹೆಂಡತಿ ಕಾಯಿಲೆ ಹಿಡಿಸಿಕೊಂಡಳು. ಇದೇ ಆಸ್ಪತ್ರೆಯಲ್ಲಿ ಮೂರ್ನಾಲ್ಕು ತಿಂಗಳು ಅಡ್ಮಿಟ್ ಆಗಿದ್ದಳು. ಏನೆಲ್ಲ ಪ್ರಯತ್ನ ಮಾಡಿ ಮಕ್ಕಳಿಗೆ ವಿಷಯ ತಿಳಿಸೋಕೆ ಒದ್ದಾಡಿದೆ. ಅವರ ಪತ್ತೆಯೇ ಸಿಗಲಿಲ್ಲ. ದಿನಾ ಇಲ್ಲಿಗೆ ಬಂದು ಹೆಂಡತಿಯ ಜೊತೆ ಇರ್ತಿದ್ದೆ. ಆಗಿನಿಂದ ಈ ಆಸ್ಪತ್ರೆ ಮನೆಯಂತೇ ಅನ್ನಿಸಿಬಿಟ್ಟಿತು. ಲಗ್ನವಾದಲ್ಲಿಂದ ಕೊನೆ ಉಸಿರಿನ ತನಕ ನನಗಾಗಿ ತನ್ನ ಜೀವವನ್ನೇ ತೇದ ಆಕೆಯೂ ಇಲ್ಲವಾದಳು. ಆಕೆಯ ಶವಸಂಸ್ಕಾರವನ್ನು ನಾನೇ ಮಾಡಿದೆ. ಎಲ್ಲ ಇದ್ದೂ ಯಾರೂ ಇಲ್ಲದ ಅನಾಥನಾಗಿಬಿಟ್ಟೆ' ಎಂದವರು ಮುಖ ಕೆಳಗೆ ಹಾಕಿ ಉಸಿರು ತೆಗೆದವರು ಮತ್ತೆ ಮುಖವೆತ್ತಿ, 'ಆ ಎಲ್ಲ ಸಂಕಟ, ತೊಳಲಾಟವನ್ನ ಮರೆಯಲಿಕ್ಕೆ ದಿನಾ ಈ ಆಸ್ಪತ್ರೆಗೆ ಬರ್ತೀನಿ. ಮಡದಿ ಒಳಗೆ ಮಲಗಿಕೊಂಡಿದಾಳೆ ಎಂದೇ ಅನ್ನಿಸುತ್ತಿರುತ್ತದೆ. ಇಲ್ಲಿ ಬದುಕಿನಲ್ಲಿ ಬಸವಳಿದ ಜನ ಕಾಣ್ತಾರೆ. ಅವರ ಕಷ್ಟದ ಮುಂದೆ ನನ್ನದೇನೂ ಅಲ್ಲ ಅಂತ ಸಮಾಧಾನ ಹೇಳಿಕೊಂಡು ಅವರಿಗೆ ನನ್ನಿಂದಾದ ಸಹಾಯ ಮಾಡ್ತೀನಿ. ಆಗ ನೋಡಿದ್ಯಲ್ಲ, ಆ ವೃದ್ಧ ಮತ್ತೆ ಆ ಹುಡುಗಿ, ಪಾಪ, ಕೈಯಲ್ಲಿ ಹಣವಿಲ್ಲದೇ ಕಂಗಾಲಾಗಿದ್ದರು. ಅಂಥವರಿಗೆ ಮಾಡುವ ಪುಟ್ಟ ಸಹಾಯ ನನ್ನ ಒಂದಿಷ್ಟು ಹೊತ್ತು ನೆಮ್ಮದಿಯಾಗಿ ಇರಿಸುತ್ತೆ. ಮತ್ತೆ... ಅದೇ ಪಾಡು' ಎಂದವರು ಗಟ್ಟಿ ಉಸಿರು ಬಿಟ್ಟರು. ಸುಲೇಖನಿಗೆ ಅವರು ಒಳಗಿನ ಒಜ್ಜೆಯನ್ನು ಕಳೆದು ಹಗುರವಾದಂತೆ ಅನಿಸಿತು.

ಸಾಂಬಮೂರ್ತಿ ಕೊಂಚ ತಡೆದು, 'ಸುಲೇಖ ಅಲ್ವಾ ನಿನ್ನ ಹೆಸರು, ಈ ಸರದಿ ಮುಗಿಯೋದಿಲ್ಲ. ಹೇಳಿದರೆ ತಪ್ಪು ತಿಳಿಬೇಡ. ಮೊದಲು ನಿನ್ನ ಅಪ್ಪನನ್ನು ನೋಡು. ನಂತರ ಡಾಕ್ಟರನ್ನು ಭೇಟಿ ಮಾಡಿ ಅವರ ಕಾಯಿಲೆ ಬಗ್ಗೆ ತಿಳಿದುಕೋ. ಆ ಜೀವ ಅಲ್ಲಿ ನಿನಗಾಗಿ ಕಾಯುತ್ತಿರುವಾಗ ಇಲ್ಲಿ ಯಾಕೆ ಒದ್ದಾಡ್ತೀಯಾ. ಬಾ, ನಾನೂ ಬರುತ್ತೇನೆ' ಎನ್ನುತ್ತ ಸುಲೇಖನ ಬಲಗೈ ಹಿಡಿದು ಎಬ್ಬಿಸಿಕೊಂಡು ಹೊರಟರು.




## ಗಂಗಾಧರ ಕೊಳಗಿ

ಕೃಷಿಕ, ಬರಹಗಾರ, ಪತ್ರಕರ್ತ. ಎರಡು ಕಾದಂಬರಿ, ಒಂದು ಕಥಾಸಂಕಲನ, ಪ್ರವಾಸ ಕಥನ, ಪರಿಸರದ ಕುರಿತ ಪ್ರಬಂಧ ಸಂಕಲನ ಮುಂತಾಗಿ ಈ ವರೆಗೆ ಆರು ಕೃತಿಗಳನ್ನೂ ಪ್ರಕಟಿಸಿದ್ದಾರೆ. ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದಲ್ಲಿ ನೆಲೆಸಿದ್ದಾರೆ.